## ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/102/2016–17/988 **ದಿನಾಂಕ: 05.05.2016**

***ಸಾರಿಗೆ ವಾಹನಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ಮತ್ತು ದ್ವೈವಾರ್ಷಿಕ ಅವಧಿಗೆ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ –:–***

**–:ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ, ಹಾಲು ಉತ್ಪಾದಕರ ಸಹಕಾರ ಸಂಘಗಳ ವ್ಯಾಪ್ತಿಯ ಹಾಲು ಉತ್ಪಾದಕರುಗಳಿಗೆ ಮತ್ತು ಸಂಘಗಳ ಕಾರ್ಯದರ್ಶಿಗಳಿಗೆ ಹೆಚ್ಚಿನ ಜ್ಞಾನರ್ಜನೆಗಾಗಿ ಎನ್.ಡಿ.ಡಿ.ಬಿ. ಆನಂದ್‌ನಲ್ಲಿ 9 ತಂಡಗಳಿಗೆ ಮಾತ್ರ ಅಧ್ಯಯನ ಪ್ರವಾಸಕ್ಕಾಗಿ ಅರೆಸುವಿಹಾರಿ ಬಸ್ಸ್ ಒದಗಿಸಲು ಮತ್ತು ಹಾಲು ಶೇಖರಣೆ ಮಾಡಲು ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು ಮತ್ತು ಕಚೇರಿ ಕೆಲಸ ಕಾರ್ಯಗಳಿಗಾಗಿ ಕಾರುಗಳನ್ನು ಒದಗಿಸಲು ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 10.05.2016 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | **ದಿನಾಂಕ: 10.06.2016 ರಂದು ಸಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 13.06.2016 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | **ದಿನಾಂಕ: 15.06.2016 ರಂದು ಬೆಳಿಗ್ಗೆ: 11.30 ಗಂಟೆಗೆ** |

**I.** ಈ ಕೆಳಗೆ ನಮೂದಿಸಿರುವಂತೆ 9 ತಂಡಗಳಿಗೆ ಗುಜರಾತ್ ರಾಜ್ಯದ ಆನಂದ್ ಪ್ರವಾಸ ಕಾರ್ಯಕ್ರಮಕ್ಕಾಗಿ 2014ರ ಅಥವಾ ನಂತರದ ಸಾಲಿನ ಅರೆಸುವಿಹಾರಿ ಬಸ್ಸ್ ಒದಗಿಸಿ ಪ್ಯಾಕೇಜ್ ಟೂರ್ ಮಾಡಲು ಮತ್ತು ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2005** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನ ಒದಗಿಸಲು ಮತ್ತು ಕಚೇರಿ ಕ್ಷೇತ್ರ ಕೆಲಸ ಕಾರ್ಯಗಳಿಗಾಗಿ **2010** ರ ಅಥವಾ ನಂತರದ ಮಾದರಿಯ ಟಾಟಾ ಇಂಡಿಕಾ ಕಾರುಗಳನ್ನು **02 ವರ್ಷದ ಅವಧಿಗೆ** ಒದಗಿಸಲು ಟೆಂಡರ್ ಕರೆಯಾಲಾಗಿದೆ. :–

**SDCMU/P&I/TENDER/2016-17/17/001**

| ಮಾರ್ಗದ ಸಂಖ್ಯೆ | ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಚಿದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಗುಜರಾತ್ ರಾಜ್ಯದ ಎನ್.ಡಿ.ಡಿ.ಬಿ. ಆನಂದ್ ಅಧ್ಯಕ್ಷರ/ಕಾರ್ಯದರ್ಶಿಗಳ 9 ತಂಡಗಳ ತರಭೇತಿ/ ಅಧ್ಯಯನ ಕಾರ್ಯಕ್ರಮ **(ತಾತ್ಕಾಲಿಕ)** | ಅರೆಸುವಿಹಾರಿ ಬಸ್ಸ್ | 9 ತಂಡಗಳ **(ತಾತ್ಕಾಲಿಕ)** ಪ್ರವಾಸ ಕಾರ್ಯಕ್ರಮ | 25,000/– | 50,000/– |
| 2 | ಹುಚ್ಚಂಗಿ ದುರ್ಗ ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಯು.ಕಲ್ಲಹಳ್ಳಿ, ಹುಚ್ಚಂಗಿದುರ್ಗ, ಗುಡಿಗುಡಾಳ್, ದಾವಣಗೆರೆ ಡೈರಿ) | 2.5 ಟನ್ | 210 ಕಿ.ಮೀ. | 30,000/– | 40,000/– |
| 3 | ಕಲ್ಪತರು ಹೊಸದುರ್ಗ ಶೀಕೇಂದ್ರ(ಹೊಸದುರ್ಗ ಶೀ.ಕೇಂದ್ರ ಒಬಾಳಪುರ, ಹೆಗ್ಗೆರೆ, ಶ್ರೀರಾಂಪುರ, ಡಿ.ತೇಕಲವಟ್ಟಿ, ಹೊಸದುರ್ಗ ಶೀಕೇಂದ್ರ) | 2.5 ಟನ್ | 146 ಕಿ.ಮೀ | 30,000/– | 40,000/– |
| 4 | ಅಕ್ಕಮಹಾದೇವಿ–3 ಹಾಲು ಶೇಖರಣಾ ಮಾರ್ಗ ( ತಡಗಣಿ ಶೀ.ಕೇಂದ್ರ ತ್ಯಾವಗೊಡು, ಕಲಂಬಿ, ಗುಡವಿ, ತಡಗಣಿ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 190 ಕಿ.ಮೀ | 25,000/– | 30,000/– |
| 5 | ತರಾಸು ಹಾಲು ಶೇಖರಣಾ ಮಾರ್ಗ ( ಬಿ.ಜಿ.ಕೆರೆ ಶೀ.ಕೇಂದ್ರ, ದೇವರೆಡ್ಡಿ ಹಳ್ಳಿ, ಹೊನ್ನೂರು, ಘಟಪರ್ತಿ, ಚಿತ್ರನಾಯಕನಹಳ್ಳಿ, ಬಿ.ಜಿ.ಕೆರೆ ಶೀ.ಕೇಂದ್ರ) | 2.5 ಟನ್ | 156 ಕಿ.ಮೀ | 30,000/– | 40,000/– |
| 6 | ಚಿತ್ರದುರ್ಗ ಡೇ ಕೌಂಟರ್ –2 ಹಾಲು ವಿತರಣಾ ಮಾರ್ಗ | 1.5 ಟನ್ | 90 ಕಿ.ಮೀ | 25,000/– | 1,00,000/– |
| 7 | ಚಿತ್ರದುರ್ಗ ಎಂ.ವಿ.ಆರ್. ಕಾರಿನ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | ಮಾಸಿಕ 3000 ಕಿ.ಮೀ | 10,000/– | 20,000/– |
| 8 | ಚಿತ್ರದುರ್ಗ ಉಪ ವ್ಯವಸ್ಥಾಪಕರು (ಶೇ) ಕಾರಿನ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | ಮಾಸಿಕ 3000 ಕಿ.ಮೀ | 10,000/– | 20,000/– |
| 9 | ಚಿತ್ರದುರ್ಗ ಮಾರುಕಟ್ಟೆ ಕಾರಿನ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | ಮಾಸಿಕ 3000 ಕಿ.ಮೀ | 10,000/– | 20,000/– |

**ನಿಬಂಧನೆ ಮತ್ತು ಷರತ್ತುಗಳು**

1. ಕ್ರಮ ಸಂಖ್ಯೆ ಒಂದಕ್ಕೆ ಟೆಂಡರ್ ಸಲ್ಲಿಸ ಬಯಸುವ ವಾಹನ ಮಾಲೀಕರು/ಟೂರಿಸ್ಟ್ ಏಜೆನ್ಸಿಗಳು/ಸಾರಿಗೆ ಏಜೆನ್ಸಿಗಳು ಕಡ್ಡಾಯವಾಗಿ ವಾಹನವನ್ನು ತಮ್ಮ ಹೆಸರಿನಲ್ಲಿ ಅಥವಾ ಏಜೆನ್ಸಿ ಹೆಸರಿನಲ್ಲಿ ಹೊಂದಿರತಕ್ಕದ್ದು. ಮತ್ತು ಎಲ್ಲಾ ವಾಹನ ದಾಖಲಾತಿಗಳನ್ನು ಪಾನ್‌ಕಾರ್ಡ್‌ನೊಂದಿಗೆ ಕಡ್ಡಾಯವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು. ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವುದು.

**2.** ಹೊರ ರಾಜ್ಯ ಪ್ರವಾಸಕ್ಕೆ ಅಂತರ ರಾಜ್ಯ ಪರ್ಮಿಟ್ ಮತ್ತು ತೆರಿಗೆ, ಟೋಲ್ ಫೀ, ಪಾರ್ಕಿಂಗ್ ಶುಲ್ಕ ಮುಂತಾದವುಗಳನ್ನು ಪ್ರವಾಸ ಸಂಸ್ಥೆಯವರೇ ಭರಿಸುವುದು. ಯಾವುದೇ Halting charge, ಡ್ರೈವರ್ ಬಾಟ ನೀಡಲಾಗುವುದಿಲ್ಲ.

**3.** ಹೊರ ರಾಜ್ಯ ಪ್ರವಾಸಕ್ಕೆ ಟೆಂಡರ್ ಹಾಕ ಬಯಸುವ ಬಸ್ಸ್ ಮಾಲೀಕರು/ಟೂರಿಸ್ಟ್ ಏಜೆನ್ಸಿಗಳು ಉಪಹಾರ, ಊಟ, ಕಾಫಿ, ಟೀ ಮತ್ತು ವಸತಿ ಸೇರಿ **ಪ್ರತಿ ಪ್ರವಾಸಿಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ತೆರಿಗೆ ಸಹಿತ ಕನಿಷ್ಠ ದರ ನಮೂದಿಸಿವುದು.**

**4. ಕ್ರಮ ಸಂಖ್ಯೆ ಒಂದನ್ನು ಹೊರತುಪಡಿಸಿ ಉಳಿದ ಮಾರ್ಗಗಳಿಗೆ ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

**5. ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**

**6. ಕನಿಷ್ಠ ಇ.ಎಂ.ಡಿ. ರೂ. 10,000/- ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಟಾಟಾ ಏಸ್ / ಮ್ಯಾಕ್ಸ್ ಪಿಕ್‌ಅಪ್/ ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**

**7.** ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.

**8.** ಹಾಲು ಶೇಖರಣಾ ವಾಹನಗಳು **2005** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಟಾಟಾ ಇಂಡಿಕಾ ಕಾರುಗಳು 2010 ರ ಅಥವಾ ನಂತರ ಮಾದಿರಿಯ ವಾಹನ ಆಗಿರಬೇಕು. ಅರೆಸುವಿಹಾರಿ ಬಸ್ಸ್ 2014 ರ ಅಥವಾ ನಂತರದ ಮಾದರಿ ಆಗಿರಬೇಕು. ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.

**9.** ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.

**10.** ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.

**11.** ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.

**12.** ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.

**13.** ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.

**14.** ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.**

**ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್**

**www.shimul.coop ಸಂಪರ್ಕಿಸಬಹುದು.**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**

ದಿನಾಂಕ : 05.05.2016 ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಸ್ಥಳ : ಮಾಚೇನಹಳ್ಳಿ ಜಿಲ್ಲಾ ಸಹಕಾರ ಹಾಲು ಒಕ್ಕೂಟ